ಯೋಜನೆಯಲ್ಲಿ ನೀಡುವುದರಿಂದ ರೈತರು ಲಾಭದಾಯಕ ಧಾರಣೆ ಪಡೆಯಲಿದ್ದಾರೆ.

ಇ) ರೈಸ್ ಟೆಕ್ನಾಲಜಿ ಪಾರ್ಕಿನ ಸ್ಥಾಪನೆಗೆ ಅಂದಾಜು ವೆಚ್ಚವು ₹ 3719.00 ಲಕ್ಷಗಳಾಗಿದೆ.

ಸರ್ಕಾರವು ಉದ್ದೇಶಿತ ಯೋಜನೆಗೆ ದಿನಾಂಕ: 27.10.2010ರಂದು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.

ಈ ಪಾರ್ಕನ್ನು ಸ್ಥಾಪಿಸಲು ನವಲಿ ಗ್ರಾಮದ ವಿವಿಧ ಸರ್ವೆ ನಂ.ಯಲ್ಲಿನ 90.20 ಎಕರೆ ಮತ್ತು ಸೋಮನಾಳ ಗ್ರಾಮದ 107.21 ಎಕರೆ ಸರ್ಕಾರಿ ಜಮೀನು ಮತ್ತು ನವಲಿ ಗ್ರಾಮದ ಖಾಸಗಿ ಜಮೀನು 121.06 ಎಕರೆ ಅಗತ್ಯತೆ ಇರುತ್ತದೆ.

ಸರ್ಕಾರಿ ಜಮೀನನ್ನು ಉದ್ದೇಶಿತ ಯೋಜನೆಗೆ ಮಂಜೂರು ಮಾಡಲು ಕಂದಾಯ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ ಹಾಗೂ ಖಾಸಗಿ ಜಮೀನನ್ನು ಭೂಸ್ವಾಧೀನದ ಮೂಲಕ ಪಡೆಯಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಆಧಾರದಲ್ಲಿ ಕೈಗೊಳ್ಳಲು ಉದ್ದೇಶಿಸಿದೆ.

ಈ) ಇಲ್ಲ.

ಎಪಿಎಂಸಿಗಳಲ್ಲಿ ರೈತರಿಗೆ ಕಲ್ಪಿಸಿರುವ ಮೂಲಭೂತ ಸೌಲಭ್ಯಗಳು

12 (21) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ವಿವಿಧ ಎಪಿಎಂಸಿ ಮಾರುಕಟ್ಟೆಗಳಲ್ಲಿ ರೈತರಿಗೆ / ವ್ಯಾಪಾರಸ್ಥರಿಗೆ ಕಲ್ಪಿಸಲಾದ ಮೂಲಭೂತ ಸೌಕರ್ಯಗಳು ಯಾವುವು (ಎ.ಪಿ.ಎಂ.ಸಿ. ವಾರು ಪೂರ್ಣ ವಿವರಗಳನ್ನು ಅಂಕಿ-ಅಂಶಗಳಲ್ಲಿ ಒದಗಿಸುವುದು) ;

ಆ) ಕಳೆದ 3 ವರ್ಷಗಳಲ್ಲಿ ಇದಕ್ಕಾಗಿ ಪ್ರತಿ ಎ.ಪಿ.ಎಂ.ಸಿ.ಗೆ ವೆಚ್ಚ ಮಾಡಲಾದ ಹಣವೆಷ್ಟು ;

ಇ) ಜಿಲ್ಲೆಯ ಬಹುತೇಕ ಎ.ಪಿ.ಎಂ.ಸಿ.ಗಳಲ್ಲಿ ರೈತರಿಗೆ ಅಗತ್ಯ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ನಿಜವೇ ;

ಈ) ಹಾಗಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರದ ಮುಂದಿರುವ ಕ್ರಮಗಳೇನು ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):

ಅ) ಬೀದರ್ ಜಿಲ್ಲೆಯ ವಿವಿಧ ಎ.ಪಿ.ಎಂ.ಸಿ. ಮಾರುಕಟ್ಟೆಗಳಲ್ಲಿ ರೈತರಿಗೆ / ವ್ಯಾಪಾರಸ್ಥರಿಗೆ ಕಲ್ಪಿಸಲಾದ ಮೂಲಭೂತ ಸೌಕರ್ಯಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

ಆ) ಕಳೆದ 3 ವರ್ಷಗಳಲ್ಲಿ ಇದಕ್ಕಾಗಿ ಪ್ರತಿ ಎ.ಪಿ.ಎಂ.ಸಿ.ಗೆ ವೆಚ್ಚ ಮಾಡಲಾದ ಹಣದ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.

ಇ) ಹೌದು.

ಈ) ಸಮಿತಿಗಳ ಆರ್ಥಿಕ ಸ್ಥಿತಿಯನ್ನು ಗಮನಿಸಿ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಅತಿ ಅವಶ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ – 1

ಬೀದರ್ ಜಿಲ್ಲೆಯ ವಿವಿಧ ಕೃ.ಉ.ಮಾ. ಸಮಿತಿಗಳಲ್ಲಿ ರೈತರಿಗೆ / ವ್ಯಾಪಾರಸ್ಥರಿಗೆ ಕಲ್ಪಿಸಲಾದ ಮೂಲಭೂತ ಸೌಕರ್ಯಗಳ ವಿವರಗಳು

ಕ್ರ ಸಂ.	ಕೃ.ಉ.ಮಾ. ಸಮಿತಿಯ ಹೆಸರು	ಕಾಮಗಾರಿ	ಇಲ್ಲಿಯವರೆಗೆ ಮಾಡಲಾದ ವೆಚ್ಚ ರೂ.ಲಕ್ಷಗಳಲ್ಲಿ
1	ಬೀದರ್	1. ರಸ್ತೆಗಳು	72.00
		2. ನೀರಿನ ವ್ಯವಸ್ಥೆ	15.00
		3. ವಿದ್ಯುತೀಕರಣ	15.00
		4. ಭಾಗಶಃ ಚರಂಡಿ	40.00
		5. ಕಛೇರಿ ಕಟ್ಟಡ	20.00
		6. ರೈತಭವನ	15.00
		7. ನೀರಿನ ತೊಟ್ಟಿ	60.00
		8. ರಾಶಿ ಖಣಗಳು	30.00
		9. ಒಣಗಿಸುವ ಕಟ್ಟೆ	10.00
		10. ಚಿಕ್ಕ ಮಳಿಗೆ	55.00
		11. ಗ್ರಾಮೀಣ ಸಂತೆ	32.62
		ಒಟ್ಟು ರೂ.	**364.62**
2	ಭಾಲ್ಕಿ	1. ಮೇಟಲ ರಸ್ತೆಗಳು	22.00
		2. ನೀರಿನ ತೊಟ್ಟಿಗಳು	25.00
		3. ಗ್ರಾಮೀಣ ಸಂತೆ	22.95
		4. ಭಾಗಶಃ ಆರ್.ಸಿ.ಸಿ. ಚರಂಡಿ	20.00

ಕ್ರ. ಸಂ.	ಕೃ.ಉ.ಮಾ. ಸಮಿತಿಯ ಹೆಸರು	ಕಾಮಗಾರಿ	ಇಲ್ಲಿಯವರೆಗೆ ಮಾಡಲಾದ ವೆಚ್ಚ ರೂ.ಲಕ್ಷಗಳಲ್ಲಿ
		5. ದಾರಿ ದೀಪ	07.00
		6. ಕಛೇರಿ ಕಟ್ಟಡ	08.00
		7. ರೈತ ಭವನ	06.00
		ಒಟ್ಟು ರೂ.	110.95
3	ಹುಮನಾಬಾದ್	1. ಗ್ರಾಮೀಣ ಸಂತೆ	26.53
		2. ರೈತ ಭವನ	05.00
		3. ರಸ್ತೆ (ಮೆಟಲ್)	10.00
		4. ದಾರಿ ದೀಪ	02.00
		5. ಕಛೇರಿ ಕಟ್ಟಡ	04.00
		6. ಚಿಕ್ಕ ಮಳಿಗೆ	05.00
		ಒಟ್ಟು ರೂ.	**52.053**
4	ಔರಾದ್	1. ಗ್ರಾಮೀಣ ಸಂತೆ	19.76
		2. ಕಚೇರಿ ಕಟ್ಟಡ	06.00
		3. ರೈತ ಭವನ	05.00
		4. ವಸತಿ ಗೃಹ	05.00
		5. ಚಿಕ್ಕ ಮಳಿಗೆ	16.00
		6. ಒಣಗಿಸುವ ಕಟ್ಟೆ	04.50
		7. ಆರ್.ಸಿ.ಸಿ. ಚರಂಡಿ	20.00

ಕ್ರ. ಸಂ.	ಕೃ.ಉ.ಮಾ. ಸಮಿತಿಯ ಹೆಸರು	ಕಾಮಗಾರಿ	ಇಲ್ಲಿಯವರೆಗೆ ಮಾಡಲಾದ ವೆಚ್ಚ ರೂ.ಲಕ್ಷಗಳಲ್ಲಿ
			03.00
		8. ದಾರಿ ದೀಪ	02.00
		9. ಕುಡಿಯುವ ನೀರು	**81.26**
		ಒಟ್ಟು ರೂ.	
5	ಬಸವಕಲ್ಯಾಣ	1. ರೈತ ಭವನ	05.00
		2. ಹರಾಜು ಕಟ್ಟೆ	04.50
		3. ಗ್ರಾಮೀಣ ಸಂತೆ	26.53
		4. ರಸ್ತೆಗಳು	12.00
		5. ದಾರಿ ದೀಪ	03.00
		6. ತೂಕ ಯಂತ್ರ	11.00
		7. ಕುಡಿಯುವ ನೀರಿನ ವ್ಯವಸ್ಥೆ	04.00
		ಒಟ್ಟು ರೂ.	**66.03**

ಅನುಬಂಧ – 2

ಕಳೆದ 3 ವರ್ಷಗಳಲ್ಲಿ ಪ್ರತಿ ಕೃ.ಉ.ಮಾ. ಸಮಿತಿಗೆ ವೆಚ್ಚ ಮಾಡಲಾದ ಹಣದ ವಿವರಗಳು

1	ಬೀದರ್	2008–09	15.00
		2009–10	42.00
		2010–11	–

2	ಭಾಲ್ಕಿ	2008–09 2009–10 2010–11	10.00 20.00 –
3	ಬಸವಕಲ್ಯಾಣ	2008–09 2009–10 2010–11	10.42 4.34 35.00
4	ಹುಮನಾಬಾದ	2008–09 2009–10 2010–11	– 5.00 –
5	ಔರಾದ	2008–09 2009–10 2010–11	– 6.50 11.00

ರೈತರ ಸಾಲದ ಬಡ್ಡಿ ಮನ್ನಾ ಮಾಡುವ ಬಗ್ಗೆ

13 (1) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ): ಮಾನ್ಯ ಸಹಕಾರಿ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ಸಾಲದ ಬಡ್ಡಿ ಮನ್ನಾ ಯೋಜನೆಯ ವಿವರಗಳೇನು ; ಇದುವರೆಗೆ ಸದರಿ ಉದ್ದೇಶಕ್ಕಾಗಿ ಸರ್ಕಾರ ವಿನಿಯೋಗಿಸಿದ ಒಟ್ಟು ಹಣವೆಷ್ಟು ;

ಆ) ಸಾಲದ ಬಡ್ಡಿ ಮನ್ನಾ ಯೋಜನೆಗಾಗಿ ಇನ್ನೂ ಸರ್ಕಾರ ನೀಡಬೇಕಾದ ಮೊಬಲಗೆಷ್ಟು ?